## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಪ್ರಕಾಶ್ ಕೆ. ರಾಥೋಡ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2800**

**ಉತ್ತರಿಸಬೇಕಾದ ದಿನಾಂಕ : 29-03-2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಒಟ್ಟು ಎಷ್ಟು ಜಿಲ್ಲಾ ಹಾಲು ಉತ್ಪಾದಕರ ಘಟಕಗಳಿವೆ; (ವಿವರ ನೀಡುವುದು) | ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಂಡಳದ ವ್ಯಾಪ್ತಿಯಲ್ಲಿ 31 ಜಿಲ್ಲೆಗಳನ್ನೊಳಗೊಂಡ ಒಟ್ಟು 15 ಜಿಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ. |

| ಕ್ರ. ಸಂ. | ಒಕ್ಕೂಟ /ಘಟಕಗಳು |
|---|---|
| 1 | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬೆಂಗಳೂರು. |
| 2 | ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಕೋಲಾರ ಡೇರಿ ಆವರಣ, ಕೋಲಾರ. |
| 3 | ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ತುಮಕೂರು |
| 4 | ಹಾಸನ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಸನ. |
| 5 | ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಲು ಉತ್ಪನ್ನ ಘಟಕ, ಮಂಡ್ಯ |
| 6 | ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಮೈಸೂರು. |
| 7 | ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಾಮರಾಜನಗರ. |
| 8 | ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಶಿವಮೊಗ್ಗ. |
| 9 | ದಕ್ಷಿಣ-ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಂಗಳೂರು. |
| 10 | ಧಾರವಾಡ, ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ. |

| | | |
|---|---|---|
| | | 11 ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ಹಾವೇರಿ.<br>12 ಬೆಳಗಾವಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬೆಳಗಾವಿ.<br>13 ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ವಿಜಯಪುರ.<br>14 ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಬಳ್ಳಾರಿ.<br>15 ಕಲಬುರುಗಿ-ಬೀದರ್ ಹಾಗೂ ಯಾದಗಿರಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಕಲಬುರಗಿ. |
| ಆ | ಮಂಡ್ಯ ಜಿಲ್ಲಾ ಹಾಲು ಒಕ್ಕೂಟದಲ್ಲಿ ಹಾಲಿಗೆ ನೀರು ಹಾಗೂ ರಾಸಾಯನಿಕಗಳನ್ನು ಬೆರೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಡ್ಯ ಜಿಲ್ಲಾ ಹಾಲು ಒಕ್ಕೂಟದಲ್ಲಿ ಹಾಲಿನ ಟ್ಯಾಂಕರ್‌ಗೆ ನೀರು ಬೆರಸಿ ದುರುಪಯೋಗ ಮಾಡಿರುವ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ಪ್ರಕರಣವನ್ನು ಸಿ.ಐ.ಡಿ ತನಿಖೆಗೆ ಆದೇಶಿಸಿರುತ್ತದೆ. ತನಿಖೆ ಪ್ರಗತಿಯಲ್ಲಿರುತ್ತದೆ.<br><br>ಅಲ್ಲದೆ, ಮದ್ದೂರು ತಾಲ್ಲೂಕು ಕೆ.ಹೊನ್ನಲಗೆರೆ ಹಾಲು ಉತ್ಪಾದಕರ ಸಹಕಾರ ಸಂಘದಿಂದ ದಿನಾಂಕ:08.01.2022 ರಂದು ಸರಬರಾಜಾದ ಹಾಲಿನಲ್ಲಿ ಮಾಲ್ಟೋಡೆಕ್ಸ್‌ಟ್ರಿನ್(Maltodextrin)ಅಂಶ ಕಂಡುಬಂದ ಹಿನ್ನಲೆಯಲ್ಲಿ ಒಕ್ಕೂಟದ ಆಡಳಿತ ಮಂಡಳಿ ತೀರ್ಮಾನದಂತೆ ಹಾಲನ್ನು ತಿರಸ್ಕರಿಸಿ ಆಹಾರ ಸುರಕ್ಷತಾ ಕಾಯ್ದೆಯಡಿ ಮದ್ದೂರು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ ಹಾಗೂ ಅಂಕಿತ ಅಧಿಕಾರಿಗಳು, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಮಂಡ್ಯ ಜಿಲ್ಲೆ ರವರಿಗೆ ಕಲಬೆರಕೆ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದಿನಾಂಕ:21-01-2022 ರಂದು ದೂರು ದಾಖಲಿಸಲಾಗಿದೆ ಮತ್ತು ಸದರಿ ಕಲಬೆರಕೆ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ. |
| ಇ | ಬಂದಿದ್ದಲ್ಲಿ, ಸರ್ಕಾರ ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದೆ. | **ಮಂಡ್ಯ ಜಿಲ್ಲಾ ಹಾಲು ಒಕ್ಕೂಟದಲ್ಲಿ ಹಾಲಿನ ಟ್ಯಾಂಕರ್‌ಗೆ ನೀರು ಬೆರಸಿರುವ ಪ್ರಕರಣದ ಸಂಬಂಧವಾಗಿ** ಮಂಡ್ಯ ಹಾಲು ಒಕ್ಕೂಟದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಿರುತ್ತದೆ. ಸದರಿಯವರ ವಿರುದ್ಧ ಆಂತರಿಕ ವಿಚಾರಣೆ ಪ್ರಗತಿಯಲ್ಲಿರುತ್ತದೆ.<br><br>**ಕರ್ನಾಟಕ ಹಾಲು ಮಹಾಮಂಡಳದ ವತಿಯಿಂದ ಅಮಾನತ್ತುಗೊಂಡಿರುವ ಅಧಿಕಾರಿಗಳು.** |

| ಹೆಸರು | ಹುದ್ದೆ | ಅಮಾನತ್ತು ಗೊಂಡಿರುವ ದಿನಾಂಕ | ಸೇವೆಗೆ ಪುನರ್ ಸ್ಥಾಪಿಸಿಕೊಂಡ ದಿನಾಂಕ |
|---|---|---|---|
| ಡಾ|| ಹೆಚ್.ವೆಂಕಟೇಶ್ | ವ್ಯವಸ್ಥಾಪಕರು (ಶೇ.&ತಾಂ.) | 4.6.2021 | 27.12.2021 |
| ಶ್ರೀಮತಿ ವಸಂತಲ ಎಂ. | ವ್ಯವಸ್ಥಾಪಕರು (ಗು.ಭ) | 9.6.2021 | 27.12.2021 |

<table>
<tr>
<td></td>
<td></td>
<td>ಒಕ್ಕೂಟದ ವತಿಯಿಂದ ಅಮಾನತ್ತುಗೊಂಡಿರುವ ಅಧಿಕಾರಿಗಳು.
<table>
<tr><th>ಹೆಸರು</th><th>ಹುದ್ದೆ</th><th>ಅಮಾನತ್ತು ಗೊಂಡಿರುವ ದಿನಾಂಕ</th><th>ಸೇವೆಗೆ ಪುನರ್ ಸ್ಥಾಪಿಸಿ ಕೊಂಡ ದಿನಾಂಕ</th></tr>
<tr><td>ಡಾ॥ ರಾಮಕೃಷ್ಣಯ್ಯ</td><td>ಉಪ ವ್ಯವಸ್ಥಾಪಕರು (ಶೇಖರಣೆ)</td><td>4.6.2021</td><td>1.1.2022</td></tr>
<tr><td>ಶ್ರೀ ಭರತ್‌ರಾಜ್ ಹೆಚ್.ಆರ್.</td><td>ಉಪ ವ್ಯವಸ್ಥಾಪಕರು (ಶೇಖರಣೆ)</td><td>4.6.2021</td><td>1.1.2022</td></tr>
<tr><td>ಶ್ರೀಮತಿ ಎಸ್.ಸಿ.ಶೈಲಜ</td><td>ಉಪ ವ್ಯವಸ್ಥಾಪಕರು (ಡಿ.ಟಿ.)</td><td>4.6.2021</td><td>1.1.2022</td></tr>
<tr><td>ಶ್ರೀ ಎನ್.ಆರ್. ಮರಿರಾಚಯ್ಯ</td><td>ಪ್ರಭಾರ ಉಪ ವ್ಯವಸ್ಥಾಪಕರು (ಶೇಖರಣೆ)</td><td>4.6.2021</td><td>1.1.2022</td></tr>
<tr><td>ಶ್ರೀ ರಮೇಶ್ ಕುಮಾರ್‌ಎಸ್.ಡಿ</td><td>ವಿಸ್ತರಣಾಧಿಕಾರಿ ದರ್ಜೆ–2</td><td>4.6.2021</td><td>1.1.2022</td></tr>
<tr><td>ಶ್ರೀ ಮಧು ಬಿ.ಸಿ.</td><td>ವಿಸ್ತರಣಾಧಿಕಾರಿ ದರ್ಜೆ–3</td><td>4.6.2021</td><td>1.1.2022</td></tr>
</table>
<br>
ಸದರಿ ಸಿಬ್ಬಂದಿಗಳ ವಿರುದ್ಧ ಆಂತರಿಕ ವಿಚಾರಣೆ ಕೈಗೊಳ್ಳಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿರುತ್ತದೆ. ಮೇಲ್ಕಂಡ ಸಿಬ್ಬಂದಿಗಳನ್ನು ಆಂತರಿಕ ವಿಚಾರಣಾ ವರದಿ ಹಾಗೂ ಸಿ.ಐ.ಡಿ. ವರದಿಯನ್ನು ಕಾಯ್ದಿರಿಸಿ ಸೇವೆಗೆ ಪುನಃ ನೇಮಿಸಲಾಗಿರುತ್ತದೆ.</td>
</tr>
<tr>
<td>ಈ</td>
<td>ಮೈಸೂರಿನಲ್ಲಿ ನಕಲಿ ತುಪ್ಪ ಮಾರಾಟವಾಗುತ್ತಿರುವುದು ಕಂಡು ಬಂದಿದೆಯೇ; ಈ ರೀತಿ ನಕಲಿ ಉತ್ಪನ್ನಗಳಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕೃತ್ಯಕ್ಕೆ ಸಂಬಂಧಪಟ್ಟವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td>
<td>ಹೌದು.<br><br>
ದಿನಾಂಕ:16–12–2021 ರಂದು ಮೈಸೂರು ಹೊರವಲಯದ ಚಾಮುಂಡಿ ಬೆಟ್ಟದ ತಪ್ಪಲಿನ ಹೊಸಹುಂಡಿ ಗ್ರಾಮದ ಗೋದಾಮಿನಲ್ಲಿ ನಂದಿನಿ ನಕಲಿ ತುಪ್ಪ ತಯಾರಿಸುವ ಬಗ್ಗೆ ವರದಿಯಾದ ಹಿನ್ನೆಲೆಯಲ್ಲಿ ಮೈಸೂರು ಹಾಲು ಒಕ್ಕೂಟದ ಅಧಿಕಾರಿಗಳು, ಸ್ಥಳೀಯ ಆಹಾರ ಪರೀಕ್ಷಣಾ ಪ್ರಾಧಿಕಾರದ ಅಧಿಕಾರಿಗಳು ಹಾಗು ಮೈಸೂರು ದಕ್ಷಿಣ ಪೋಲೀಸ್ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ಮತ್ತು ಮಹಜರು ಮಾಡಿ ಗೋದಾಮನ್ನು ಸೀಲ್ ಮಾಡಿರುತ್ತಾರೆ ಹಾಗೂ ಮೈಸೂರು ದಕ್ಷಿಣ ಪೋಲಿಸ್ ಅಧಿಕಾರಿಗಳು ಅನುಮಾನಸ್ಪದ 7 ಜನರ ಮೇಲೆ FIR ದಾಖಲಿಸಿ ಅಪರಾಧಿಗಳನ್ನು ಬಂಧಿಸಿದ್ದು, ತನಿಖೆ ಪ್ರಗತಿಯಲ್ಲಿದೆ<br><br>
ಸ್ಥಳೀಯ ಜಿಲ್ಲಾ ಪೋಲೀಸ್ ಅಧೀಕ್ಷಕರು ಮತ್ತು ಹಿರಿಯ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಮೈಸೂರು ಹಾಲು ಒಕ್ಕೂಟವು ನೀಡಿದ ದೂರಿನ ಮೇರೆಗೆ ಪ್ರಾಥಮಿಕ ತನಿಖಾ ವರದಿಯನ್ನು (FIR) ದಾಖಲಿಸಿರುತ್ತಾರೆ. ಈವರೆಗೆ, ಹನ್ನೊಂದು ಜನರ ವಿರುದ್ಧ ಎಫ್.ಐ.ಆರ್. ದಾಖಲಿಸಿ, ಈ ಪೈಕಿ ಕೆಳಕಂಡ 7 ಜನರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.<br><br>
1. ಮುರುಗೇಶ್– A1</td>
</tr>
</table>

2. ಕುಮಾರ್– A4
3. ಶಣ್ಮುಗ ಅಲಿಯಾಸ್ ಕುಮಾರ–A5
4. ಚಂದ್ರಶೇಖರ್ – A6
5. ಪ್ರಾಣೇಶ್– A7
6. ರಾಜೇಶ್ – A8
7. ಲೀಲಾರಾಮ್ ಅಲಿಯಾಸ್ ಲಲಿತ್ ಚೌಧರಿ– A9

ಕಹಾಮದ ಕೆಲವು ಸಗಟು ಮಾರಾಟಗಾರರು ಸಹ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಈ ಕೆಳಕಂಡವರ ವಿರುದ್ಧ FIR ದಾಖಲಾಗಿದ್ದು ತನಿಖೆ ಪ್ರಗತಿಯಲ್ಲಿದೆ.

- ಮಾತೃಭಾಯಿ ಎಂಟರ್ ಪ್ರೈಸಸ್ಸ್ – ವಿವಿ ಪುರಂ
- ಶೃತಿ ಮಾರ್ಕೆಟಿಂಗ್–ಜಯನಗರ
- ಬಾಲಾಜಿ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್–ಮೈಕೋ ಲೇಔಟ್
- ಚಂದನಾ ಎಂಟರ್‌ಪ್ರೈಸಸ್ಸ್–ಜಯನಗರ ಉಪ ವಿಭಾಗ

**ನಕಲಿ ಜಾಲವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ.**

1) ಪೋಲಿಸ್ ಮಹಾ ನಿರ್ದೇಶಕರು ದಿನಾಂಕ: 27.12.2021 ರಂದು ರಾಜ್ಯದ ಎಲ್ಲಾ ಪೋಲಿಸ್ ಆಯಕ್ತರುಗಳು ಮತ್ತು ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ FIR ದಾಖಲಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಂತೆ ಸುತ್ತೋಲೆ ಮೂಲಕ ತಿಳಿಸಿರುತ್ತಾರೆ.

2) ಗೋದಾಮಿನಲ್ಲಿ ಅಸಲಿ ತುಪ್ಪದ ಜೊತೆ ಡಾಲ್ಡ ಮತ್ತು ಇತರೆ ಪದಾರ್ಥಗಳನ್ನು ಬಳಸಿ ನಕಲಿ ತುಪ್ಪ ತಯಾರಿಸುತ್ತಿರುವ ಬಗ್ಗೆ ಮಾಹಿತಿಯನ್ನು ಮೈಸೂರು ದಕ್ಷಿಣ ಪೋಲಿಸ್ ಠಾಣೆಗೆ ಮತ್ತು ಆಹಾರ ಸುರಕ್ಷತಾ ಪ್ರಾಧಿಕಾರಕ್ಕೆ ನೀಡಿದ್ದು ಮೈಸೂರು ವಿಭಾಗದ ಅಹಾರ ಸುರಕ್ಷತಾ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಸ್ಥಳದಲ್ಲಿದ್ದ ನಂದಿನಿ ತುಪ್ಪ ಕಲಬೆರಕೆಗೆ ಉಪಯೋಗಿಸುತ್ತಿದ್ದ ಡಾಲ್ಡ, ಪಾಮ್ ಆಯಿಲ್ ಹಾಗೂ ಪ್ಯಾಕಿಂಗ್ ಪರಿಕರಗಳು ಮತ್ತು ಪ್ಯಾಕ್ ಮಾಡುತ್ತಿರುವ ಯಂತ್ರ, ನಕಲಿ ಸ್ಟಿಕರ್, ನಕಲಿ ಅಗ್‌ಮಾರ್ಕ್ ಲೇಬಲ್, ನಕಲಿ ಟಿನ್ ಕ್ಯಾಪ್, ಬಾಬ್ ಟೇಪ್, ಕಾರೋಗೇಟೇಡ್ ಬಾಕ್ಸ್‌ಗಳನ್ನು ಹಾಗೂ ಗೋದಾಮಿನಲ್ಲಿ ಇದ್ದ ಸುಮಾರು 3–4 ಟನ್ ಅಸಲಿ ನಂದಿನಿ ತುಪ್ಪ ಮತ್ತು 5–6 ಟನ್ ಕಲಬೆರಕೆ ತುಪ್ಪ ಇರುವುದನ್ನು ಸಹ ಖಾತರಿ ಮಾಡಿಕೊಂಡು ಮಹಜರು ಮಾಡಿರುತ್ತಾರೆ. ಅಲ್ಲದೇ ತುಪ್ಪದ ಕಲಬೆರಕೆ ಮಾದರಿಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಿ ಸ್ಥಳ ಮಹಜರು ಮಾಡಿ ಗೋದಾಮನ್ನು ಸೀಲ್ ಮಾಡಿರುತ್ತಾರೆ

3) ಘಟನೆ ನಡೆದ ತಕ್ಷಣ ಎಲ್ಲಾ ಒಕ್ಕೂಟ ಮತ್ತು ಘಟಕಗಳ ಮುಖ್ಯಸ್ಥರೊಂದಿಗೆ ತುರ್ತು ವಿಡಿಯೋ ಸಂವಾದ ಸಭೆಯನ್ನು ಕೈಗೊಂಡು ರಾಜ್ಯದಾದ್ಯಂತ ಪ್ರತಿದಿನ ಮಾರುಕಟ್ಟೆಯಲ್ಲಿ ಲಭ್ಯವಿರುವ ನಂದಿನಿ ತುಪ್ಪದ ಮಾದರಿಗಳನ್ನು ಪಡೆದು ಪರೀಕ್ಷೆಗಳನ್ನು ಕೈಗೊಳ್ಳಲು ತಿಳಿಸಿ ಕ್ರಮವಿಡಲಾಗಿದೆ.

4) ಕೆ.ಎಂ.ಎಫ್. ವತಿಯಿಂದ ನಕಲಿ ತುಪ್ಪದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲಾಗಿದ್ದು, ನಂದಿನಿ ತುಪ್ಪದ ಪ್ಯಾಕ್‌ನಲ್ಲಿ ತುಪ್ಪದ ಗುಣಮಟ್ಟದಲ್ಲಿ ಯಾವುದಾದರೂ ವ್ಯತ್ಯಾಸ ಕಂಡುಬಂದಲ್ಲಿ ತಕ್ಷಣ ಕೆ.ಎಂ.ಎಫ್. ಗೆ ದೂರವಾಣಿ / ಈ–ಮೇಲ್ ಮೂಲಕ ದೂರು/ಮಾಹಿತಿ ನೀಡುವಂತೆ ಗ್ರಾಹಕರಿಗೆ ಮನವಿ ಮಾಡಲಾಗಿದೆ.

5) ದಿನಾಂಕ 1.2.2022 ರಂದು ಕೆ.ಎಂ.ಎಫ್ ನ ನಿರ್ದೇಶಕ ಮಟ್ಟದ ಹಿರಿಯ ಅಧಿಕಾರಿಯ ನೇತೃತ್ವದಲ್ಲಿ 8 ವಿವಿಧ ವೃಂದದ ಅಧಿಕಾರಿಗಳ **'ಜಾಗೃತ ದಳ'** ತಂಡವನ್ನು ರಚಿಸಲಾಗಿದ್ದು, ಸದರಿತಂಡದ ವತಿಯಿಂದ ಪ್ರತಿನಿತ್ಯ ಉತ್ಪನ್ನಗಳ ಘಟಕಗಳನ್ನು ಸಗಟು ಮಾರಾಟಗಾರರು ಮತ್ತು ಪಾರ್ಲರ್‌ಗಳ ಭೇಟಿ ಮಾಡಿ, ಆಗ್ಗಿಂದಾಗೆ ತುಪ್ಪದ ಮಾದರಿಗಳನ್ನು ಪಡೆದು ಪರೀಕ್ಷೆಗೆ ಒಳಪಡಿಸಿ ಗುಣಮಟ್ಟವನ್ನು ಖಾತರಿ ಪಡಿಸಲಾಗುತ್ತಿದೆ.

6) ಮೈಸೂರು ಮಾರಾಟ ಮಳಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳಿಗೆ ಮತ್ತು 11 ಮಂದಿ ಸಗಟು ಮಾರಾಟಗಾರರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.

7) ಕ.ಹಾ.ಮ.ವು ನಿಗಧಿಪಡಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲಾ ಒಕ್ಕೂಟ/ ಘಟಕಗಳಿಗೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ:

8) ಒಕ್ಕೂಟಗಳಿಂದ ಡಿಪೋಗಳಿಗೆ ಸರಬರಾಜಾಗುವ ತುಪ್ಪವು ವಾಹನಗಳಿಗೆ ಲೋಡ್ ಮಾಡಿದ ಸಮಯದಿಂದ ಡಿಪೋಗಳಲ್ಲಿ ಅನ್‌ಲೋಡ್ ಮಾಡುವ ಸಮಯದವರೆಗಿನ ಚಲನವಲನಗಳನ್ನು ಗಮನಿಸಲು ನಿರ್ದಿಷ್ಟವಾದ ಅಧಿಕಾರಿಗೆ ಜವಾಬ್ದಾರಿಯನ್ನು ನಿಗದಿಪಡಿಸಲಾಗಿದೆ.

9) ಬೆಂಗಳೂರು ಮಾರಾಟ ಮಳಿಗೆಗೆ ಹತ್ತಿರವಿರುವ ಒಕ್ಕೂಟಗಳಿಂದ ತುಪ್ಪದ ವಾಹನಗಳು ಸಂಜೆ ಲೋಡ್ ಆಗುತ್ತಿದ್ದು, ಡಿಪೋಗೆ ಮರುದಿನ ಬೆಳಿಗ್ಗೆ ಅನ್‌ಲೋಡ್‌ಗೆ ಬರುತ್ತಿರುತ್ತವೆ. ಇದನ್ನು ತಪ್ಪಿಸಲು ಹತ್ತಿರವಿರುವ ಒಕ್ಕೂಟಗಳು ತುಪ್ಪವನ್ನು ಸರಬರಾಜು ಮಾಡುವ ದಿನವೇ ಅಂದರೆ ಅದೇ ದಿನ ಬೆಳಿಗ್ಗೆ ಲೋಡ್ ಮಾಡಿ, ಸಂಜೆ 4.00 ಗಂಟೆಯೊಳಗೆ ಡಿಪೋಗಳಿಗೆ ತಲುಪುವಂತೆ ನೋಡಿಕೊಳ್ಳಲಾಗಿದೆ.

10) ಒಕ್ಕೂಟ/ಘಟಕಗಳ ತುಪ್ಪದ ಪ್ಯಾಕಿಂಗ್ ಫಿಲಂ, ಕಾರುಗೇಟೆಡ್ ಬಾಕ್ಸ್, ಕಲರ್‌ಕೋಡ್, ಲೇಬಲಿಂಗ್, ಕಂಟೇನರ್‌ಗಳು, ಕೋಡಿಂಗ್ ಮಾದರಿ, ಫಾಂಟ್ ಸೈಜ್, ಬಾಪ್‌ಟೇಪ್ ಸೇರಿದಂತೆ ಎಲ್ಲವೂ ಏಕರೂಪದಲ್ಲಿರುವಂತೆ ತಿಳಿಸಿ ಮೇಲಿನ ಸಾಮಗ್ರಿಗಳು ಒಳಗೊಂಡಂತೆ ಎಲ್ಲಾ ಪ್ಯಾಕಿಂಗ್ ಸಾಮಗ್ರಿಗಳನ್ನು ಖರೀದಿಸುವ ಮೊದಲುಅದರ ಪ್ರಿಂಟ್ ಪ್ರೂಫ್ ಹಾಗೂ ಗುಣಮಟ್ಟದ ಅಂಶಗಳ ಬಗ್ಗೆ ಕ.ಹಾ.ಮ.ದ ಮಾರುಕಟ್ಟೆ ಹಾಗೂ ಗುಣನಿಯಂತ್ರಣ ವಿಭಾಗದಿಂದ ಕಡ್ಡಾಯವಾಗಿ ಅನುಮೋದನೆಯನ್ನು ಪಡೆಯುಲು ಕ್ರಮವಿಡಲಾಗಿದೆ.

11) ಪ್ಯಾಕ್‌ಗಳ ಮೇಲೆ ಮುದ್ರಿತವಾಗಿರುವ ಕೋಡಿಂಗ್ (ಇಂಕ್‌ಜೆಟ್) ಅಂಶಗಳು ಗುಣನಿಯಂತ್ರಣ ವಿಭಾಗವು ನಿಗದಿಪಡಿಸಿರುವ ರೀತಿ ಏಕರೂಪವಾಗಿರುವಂತೆ ಮಾಡಲಾಗಿದೆ.

12) ತುಪ್ಪವನ್ನು ಡಿಪೋಗಳಿಗೆ ರವಾನೆ ಮಾಡುವಾಗ ಬ್ಯಾಚ್ ನಂಬರ್,

| | | |
|---|---|---|
| | | ಉತ್ಪಾದನೆಯಾದ ದಿನಾಂಕ, ಇತರೆ ಪ್ರಮುಖ ವಿವರಗಳನ್ನು ಇನ್ವಾಯ್ಸ್‌ನಲ್ಲಿ ನಮೂದಿಸುವುದನ್ನು ಕಡ್ಡಾಯಗೊಳಿಸಲಾಗಿದೆ. |
| | | 13) ಒಕ್ಕೂಟದ ವ್ಯಾಪ್ತಿಯಲ್ಲಿ ಯಾವುದೇ ಅಧಿಕೃತ ಮಾರಾಟಗಾರರು ಕ.ಹಾ.ಮ.ವು ಸೂಚಿಸಿರುವ ದರಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವುದು ಕಂಡು ಬಂದರೆ ಅಂತಹ ಮಾರಾಟಗಾರಿಕೆಯನ್ನು ರದ್ದುಗೊಳಿಸಿ, ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸೂಚಿಸಲಾಗಿದೆ. |
| | | 14) ಕ.ಹಾ.ಮ. ವತಿಯಿಂದ ಮಾತ್ರ ಸಗಟು ಮಾರಾಟಗಾರರ ನೇಮಕ ಮಾಡಲು ಕ್ರಮವಿಡಲಾಗಿದೆ. |
| | | 15) ಒಕ್ಕೂಟ/ಘಟಕವು ರೀಟೇಲ್ ದರವನ್ನು ಹೊರತುಪಡಿಸಿ ಉತ್ಪನ್ನಗಳನ್ನು ಇತರೆ ಯಾವುದೇ ದರಗಳಲ್ಲಿ/ಮಾದರಿಯಲ್ಲಿ/ ಯೋಜನೆಗಳಲ್ಲಿ ಕ.ಹಾ.ಮ. ಆದೇಶ/ಸೂಚನೆ ಹೊರತು ಮಾರಾಟ ಮಾಡುವಂತಿಲ್ಲ ಎಂದು ಆದೇಶಿಸಲಾಗಿದೆ. |
| | | 16) ಒಕ್ಕೂಟ/ಘಟಕಗಳಲ್ಲಿ ಪರಿಸ್ಥಿತಿಯನ್ನು ನಿಯಂತ್ರಿಸಲು 15 ಕೆ.ಜಿ. ಟಿನ್ ತುಪ್ಪದ ಉತ್ಪಾದನೆ ಹಾಗೂ ಮಾರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. |
| | | 17) ಜೊತೆಗೆ ಡಿಪೋ ಮುಖ್ಯಸ್ಥರುಗಳು, ಸಗಟು ಮಾರಾಟಗಾರರು, ಸಾಗಾಣಿಕೆದಾರರು, WC&FA ಕಡ್ಡಾಯವಾಗಿ ಪಾಲಿಸಬೇಕಾದ / ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿದೆ. |
| | | 18) ಆದ್ಯತೆ ಮೇರೆಗೆ ನಂದಿನಿ ಉತ್ಪನ್ನಗಳಿಗೆ QR code & Hologram ಅಳವಡಿಸಲು ಕ್ರಮವಿಡಲಾಗುತ್ತಿದೆ. |
| | | 19) ಉತ್ಪನ್ನಗಳ ಸಾಗಾಣಿಕೆಗಳಿಗೆ ಸೂಕ್ತ ನವೀನ ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಕ್ರಮ ಜಾರಿಯಲ್ಲಿರುತ್ತದೆ. |
| | | 20) ಪ್ಯಾಕಿಂಗ್ ಫಿಲಂ ಹಾಗೂ ವಿನ್ಯಾಸಗಳಲ್ಲಿ ಸೂಕ್ತ ತಂತ್ರಾಂಶವನ್ನು ಅಳವಡಿಸುವ ಕ್ರಮ ಜಾರಿಯಲ್ಲಿರುತ್ತದೆ. |
| | | 21) ಕರ್ನಾಟಕ ಹಾಲು ಮಹಾಮಂಡಳದ ಉತ್ಪನ್ನಗಳ ಹೆಸರಿನಲ್ಲಿ ನಕಲಿ ತುಪ್ಪ ಹಾಗೂ ಇತರೆ ಪದಾರ್ಥಗಳನ್ನು ಮಾರಾಟ ಮಾಡಿ 'ನಂದಿನಿ ಬ್ರ್ಯಾಂಡ್' ಗೆ ಧಕ್ಕೆ ತಂದಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ನಷ್ಟ ವಸೂಲಾತಿ (Demurrage) ಮಾಡುವ ಕುರಿತಂತೆ ಕಾನೂನು ತಜ್ಞರೊಡನೆ ಚರ್ಚಿಸಲಾಗುತ್ತಿದೆ. |
| | | 22) 'ನಂದಿನಿ' ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ನಕಲಿ ಮಾಡುವವರ ವಿರುದ್ಧ ನೇರಕ್ರಮ ಕೈಗೊಳ್ಳಲು ನಂದಿನಿ ಬ್ರ್ಯಾಂಡನ್ನು 'well-known brand' ಅಡಿಯಲ್ಲಿ ನೊಂದಣಿ ಮಾಡುವ ಕ್ರಮ ಜಾರಿಯಲ್ಲಿರುತ್ತದೆ. |

**ಸಂಖ್ಯೆ: ಸಿಒ 54 ಸಿಆರ್‌ಸಿ 2022**

**(ಎಸ್.ಟಿ. ಸೋಮಶೇಖರ್)**

**ಸಹಕಾರ ಸಚಿವರು**